**CC 831/2014**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್ 831/2014**

**ಸಿ ಡಬ್ಲ್ಯೂ 10**
**ಪಿ ಡಬ್ಲ್ಯೂ: 7**

| | |
|---|---|
| **ಸಾಕ್ಷಿಯ ಹೆಸರು -** | **ಎಂ ಜೆ ನಾಗರಾಜ** |
| **ತಂದೆಯ ಹೆಸರು -** | **ಲೇಟ್ ಗಂಗಪ್ಪ** |
| **ವಯಸ್ಸು -** | **64 ವರ್ಷಗಳು** |
| **ಉದ್ಯೋಗ -** | **ನಿವೃತ್ತ ಆರಕ್ಷಕ ನೀರಿಕ್ಷಕ** |
| **ವಾಸಸ್ಥಳ -** | **ತುರವಿಕೆರೆ, ತುಮಕೂರು ಜಿಲ್ಲೆ** |

**ಸಾಕ್ಷಿಯನ್ನು ದಿನಾಂಕ: 06-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಎ. ಪಿ. ಪಿ. ಅವರಿಂದ**

ನಾನು **08-10-2012** ರಿಂದ **03-09-2013** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: **28-03-2013** ರಂದು ಬೆಳಿಗ್ಗೆ **11.30** ಗಂಟೆಗೆ ನ್ಯಾಯಾಲಯದಿಂದ ಬಂದ ಖಾಸಗಿ ಪಿರ್ಯಾದನ್ನು ಸ್ವೀಕರಿಸಿ ಠಾಣೆ ಮೊಕದ್ದಮೆ ಸಂಖ್ಯೆ **70/2013** ರಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತೇನೆ. ಸಾಕ್ಷಿ ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ: **12** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ: **12(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿ ನೋಡಿ ಗುರುತಿಸಿದ್ದು, ಅದನ್ನು ನಿಪಿ: **13** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ: **13(ಎ)** ಎಂದು ಗುರುತಿಸಲಾಯಿತು.

ದಿ: **30-03-2013** ರಂದು ಚಾಸಾ **-1** ರವರನ್ನು ಠಾಣೆಗೆ ಕರೆಯಿಸಿ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ **-1** ರವರು ತೋರಿಸಿದ ಸ್ಥಳದಲ್ಲಿ ಚಾಸಾ **-2** ಮತ್ತು **3** ರವರು ಸಮಕ್ಷಮ ಮಧ್ಯಾಹ್ನ **1.00** ರಿಂದ **2.00** ಗಂಟೆಯ

ವರೆಗೆ ಪಂಚನಾಮೆ ಮಾಡಿರುತ್ತೇನೆ. ಸಾಕ್ಷಿ ನಿಪಿಃ **3** ರ ಗುನ್ನಾ ಸ್ಥಳದ ಪಂಚನಾಮೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ **3(ಸಿ)** ಎಂದು ಗುರುತಿಸಲಾಯಿತು.

ದಿಃ **01-04-2013** ರಂದು ಎಚ್.ಡಿ.ಎಫ್.ಸಿ ಮತ್ತು ಐ.ಡಿ.ಬಿ ಆಯ್ ಬ್ಯಾಂಕ್ ಗಳಿಗೆ ಪ್ರಕರಣಕ್ಕೆ ಸಂಬಂಧ ಪಟ್ಟ ದಾಖಲೆಗಳನ್ನು ನೀಡುವಂತೆ ಕೋರಿಕೆ ನೀಡಿರುತ್ತೇನೆ. ದಿಃ **16-04-2013** ರಂದು ಎಚ್.ಡಿ.ಎಫ್.ಸಿ ಬ್ಯಾಂಕ್ ನವರು ಈ ಪ್ರಕರಣಕ್ಕೆ ಸಂಬಂಧಿಸಿ ನೀಡಿದ್ದ ದಾಖಲೆಗಳನ್ನು ಸ್ವೀಕರಿಸಿರುತ್ತೇನೆ. ಸಾಕ್ಷಿ ನಿಪಿಃ **5** ರಿಂದ **7** ಅನ್ನು ನೋಡಿ ಗುರುತಿಸಿರುತ್ತಾರೆ. ದಿಃ **14-05-2013** ರಂದು ಚಾಸಾ **-1** ರವರು ಅದಿರು ವ್ಯವಹಾರಕ್ಕೆ ಸಂಬಂಧಿಸಿ ದಾಖಲೆಗಳನ್ನು ನೀಡುವಂತೆ ಗಣಿ ಮತ್ತು ಭೂ-ವಿಜ್ಞಾನ ಇಲಾಖೆಗೆ ಪತ್ರವನ್ನು ನೀಡಿರುತ್ತೇನೆ. ದಿಃ **28-05-2013** ರಂದು ಗಣಿ ಮತ್ತು ಭೂ-ವಿಜ್ಞಾನ ಇಲಾಖೆಯಿಂದ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಸ್ವೀಕರಿಸಿರುತ್ತೇನೆ. ದಿಃ **17-06-2013** ರಂದು ಐ.ಡಿ.ಬಿ.ಆಯ್ ಬ್ಯಾಂಕ್ ನಿಂದ ಒಂದು ಪತ್ರವನ್ನು ಸ್ವೀಕರಿಸಿರುತ್ತೇನೆ. ಸದರಿ ಸಾಕ್ಷಿ ಪ್ತರ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **14** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **14(ಎ)** ಎಂದು ಗುರುತಿಸಲಾಯಿತು. ಆ ಪತ್ರದನ್ವಯ ಆರೋಪಿ ಮಂಜುನಾಥ ಐ.ಡಿ.ಬಿ.ಆಯ್ ಬ್ಯಾಂಕ್‌ನ ಗ್ರಾಹಕನಲ್ಲ ಎಂದು ಮತ್ತು ಚೆಕ್ ಡಾಲ್ಫಿನ್ ಇನ್ ಪ್ರಾ ಟವರ್ ಹೆಸರಿನಲ್ಲಿ ಇರುವುದಾಗಿ ಬ್ಯಾಂಕಿನವರು ಮಾಹಿತಿ ನೀಡಿರುತ್ತಾರೆ.

ನಾನು ದಿಃ **16-08-2013** ರಂದು ಡಾಲ್ಫಿನ್ ಇನ್ ಪ್ರಾ ಟವರ್ ರವರಿಗೆ ಪತ್ರ ಬರೆದಿರುತ್ತೇನೆ. ಸಾಕ್ಷಿ ಪತ್ರ ನೋಡಿ ಗುರುತಿಸಿದ್ದು, ನಿಪಿಃ **15** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **15(ಎ)** ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡುವಂತೆ ಮತ್ತು ಅಸಲಿ ಚೆಕ್ ನ ನಕಲನ್ನು ನೀಡುವಂತೆ ಕೇಳಿದ್ದೆ. ಸದರಿಯವರು ಅದೇ ದಿನ ನನಗೆ ಒಂದು ಪತ್ರವನ್ನು ಮತ್ತು

ಚೆಕ್‌ನ ನಕಲನ್ನು ನೀಡಿರುತ್ತಾರೆ. ಸಾಕ್ಷಿ ಪತ್ರ ಮತ್ತು ಚೆಕ್‌ನ ನಕಲು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿಃ 16 ಮತ್ತು 17 ಎಂದು, ಸಾಕ್ಷಿಯ ಸಹಿಯನ್ನು 16(ಎ) ಎಂದು ಗುರುತಿಸಲಾಯಿತು. ದಿಃ 16-08-2013 ರಂದು ಬ್ಯಾಂಕಿನವರಿಗೆ ಪತ್ರ ನೀಡಿ ಅವರಿಂದ ಅದೇ ದಿನ ಡಾಲ್ಫಿನ್ ಇನ್ ಪ್ರಾ ಟವರ್ ರವರ ಖಾತೆಯ ಮಾಹಿತಿಯನು ಪಡೆದಿರುತ್ತೇನೆ. ಸಾಕ್ಷಿ ತಾವು ನೀಡಿದ ಪತ್ರ ಮತ್ತು ಬ್ಯಾಂಕಿನವರು ನೀಡಿರುವ ಮಾಹಿತಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿಃ 18 ಮತ್ತು 19 ಎಂದು ಗುರುತಿಸಲಾಯಿತು.

ದಿಃ 12-08-2013 ರಂದು ಐ.ಡಿ.ಬಿ.ಆಯ್ ಬ್ಯಾಂಕ್ ವ್ಯವಸ್ಥಾಪಕರ ಕೊಠಡಿಯಲ್ಲಿ ಪಂಚರಾದ ಚಾಸಾ -4 ಮತ್ತು 5 ರವರು ಸಮಕ್ಷಮ ಪಂಚನಾಮೆ ಮಾಡಿ ಪ್ರಕರಣದಲ್ಲಿನ ಚೆಕ್ ಅನ್ನು ಜಪ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿ ನಿಪಿಃ 1 ರ ಪಂಚನಾಮೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ 1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿಃ 2 ರ ಚೆಕ್ ನೋಡಿ ಗುರುತಿಸಿರುತ್ತಾರೆ. ದಿಃ 28-08-2013 ರಂದು ಎಚ್.ಡಿ.ಎಫ. ಸಿ ಮತ್ತು ಐ.ಡಿ.ಬಿ.ಆಯ್ ಬ್ಯಾಂಕ್ ಗೆ ಆರೋಪಿಯ ಬ್ಯಾಂಕ್ ವ್ಯವಹಾರದ ದಾಖಲೆ ನೀಡುವಂತೆ ಪತ್ರ ಬರೆದಿರುತ್ತೇನೆ. ದಿಃ 30-08-2013 ರಂದು ಚಾಸಾ -1 ರವರು ನಡೆಸಿದ ಬ್ಯಾಂಕಿನ ವಹಾರದ ಸ್ಟೇಟ್ ಮೆಂಟ್ ನೀಡಿದ್ದು ಅವುಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಸ್ಟೇಟ್‌ಮೆಂಟ್ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 20 ಎಂದು ಗುರುತಿಸಲಾಯಿತು. ಚಾಸಾ -3, 6 ರಿಂದ 8 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 03-09-2013 ರಂದು ವರ್ಗಾವಣೆ ನಿಮಿತ್ತ ಪರಕರಣದ ಮುಂದಿನ ತನಿಖೆಯನ್ನು ಚಾಸಾ -11 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಾಯ್.ಎಂ.ಎಂ ವಕೀಲರಿಂದ**

ಚಾಸಾ -1 ರವರು ಠಾಣೆಗೆ ನೇರವಾಗಿ ಬಂದು ಯಾವತ್ತೂ ದೂರು ನೀಡಿರುವುದಿಲ್ಲ ಅಂದರೆ ಸರಿ. ನನ್ನ ಮೇಲಾಧಿಕಾರಿಗಳಿಗೆ ದೂರು ನೀಡಿದ ಬಗ್ಗೆ ಯಾವುದೇ ಮಾಹಿತಿ ತನಿಖೆಯ ವೇಳೆ ಲಭ್ಯ ಆಗಿಲ್ಲ. 2013 ರ ವಿಧಾನಸಭಾ ಚುನಾವಣೆ ಇದ್ದಾಗ ಮಾರ್ಚ್ ನಿಂದ ಮೇ ತಿಂಗಳವರೆಗೆ ನಾವು ಚುನಾವಣೆ ಕರ್ತವ್ಯದಲ್ಲಿದ್ದೇವೆ ದೂರನ್ನು ಸ್ವೀಕರಿಸುವುದಿಲ್ಲ ಎಂದು ಯಾವುದೇ ವ್ಯಕ್ತಿಯನ್ನು ಠಾಣೆಯಿಂದ ಕಳುಹಿರುವುದಿಲ್ಲ.

ನ್ಯಾಯಾಲಯದಿಂದ ಬಂದಿದ್ದ ಖಾಸಗಿ ಪಿರ್ಯಾದಿಯ ನಕಲನ್ನು ಸಂಪೂರ್ಣವಾಗಿ ಒದಿರುತ್ತೇನೆ. ಸದರಿ ದೂರಿನಲ್ಲಿ ಆರೋಪಿ ಚಾಸಾ -1 ರವರಿಗೆ ಮೋಡ ಮಾಡಿರುತ್ತಾನೆ ಎಂದು ಎಲ್ಲಿಯೂ ನಮೂದು ಆಗಿಲ್ಲ ಅಂದರೆ ಸರಿಯಲ್ಲ. ಆರೋಪಿಗೂ ಮತ್ತು ಚಾಸಾ -1 ರವರಿಗೂ ಅದಿರು ಸರಬರಾಜು ವಿಚಾರವಾಗಿ ಎನೆಲ್ಲಾ ಕರಾರುಗಳು ಆಗಿವೆ ಎಂದು ನಾನು ತನಿಖೆ ಮಾಡಿರುವುದಿಲ್ಲ. ನಾನು ಚಾಸಾ -1 ರವರಿಗೆ ನೋಟಿಸ್ ನೀಡಿ ಅವರಿಗೂ ಮತ್ತು ಆರೋಪಿಗೂ ಅದಿರು ಸರಬರಾಜು ವಿಚಾರವಾಗಿ ಆಗಿರಬಹುದಾದ ವ್ಯವಹಾರಗಳಿಗೆ ಸಂಬಂಧಿಸಿ ದಾಖಲೆಗಳನ್ನು ಹಾಜರುಪಡಿಸಿ ಎಂದು ಕೇಳಿರುವುದಿಲ್ಲ. ತನಿಖೆಯ ಪ್ರಕಾರ ಚಾಸಾ -1 ಮತ್ತು ಆರೋಪಿಯ ಮಧ್ಯೆ ಯಾವುದೇ ಮೈನಿಂಗ್ ಸಂಬಂಧಿಸಿದ ವ್ಯವಹಾರ ಆಗಿಲ್ಲ ಎಂದು ಕಂಡುಬರುತ್ತದೆ ಅಂದರೆ ಸರಿಯಲ್ಲ.

ಪರಕರಣ ದಾಖಲಿಸಿದ ನಂತರ ಆರೋಪಿಗೆ ನೋಟಿಸ್ ನೀಡಿ ಪ್ರಕರಣ ದಾಖಲಾದ ಬಗ್ಗೆ ಮಾಹಿತಿ ಕೊಟ್ಟು, ಚಾಸಾ -1 ರವರೊಂದಿಗೆ ಆಗಿರಬಹುದಾದ ವ್ಯವಹಾರಕ್ಕೆ ಸಂಬಂಧಿಸಿ ಇರುವಂತಹ ದಾಖಲೆಗಳನ್ನು ತನಿಖೆಗೆ ಹಾಜರಾಗಿ ಹಾಜರುಪಡಿಸಬೇಕೆಂದು ನಾನು ಕೇಳಿರುವುದಿಲ್ಲ. ಎಫ್.ಐ.ಆರ್ ಆದ ನಂತರ ಪಂಚನಾಮೆ ದಿನದಂದೇ ಬ್ಯಾಂಕಿಗೆ ಹೋಗಿರುತ್ತೇನೆ. ಎಫ್.ಐ.ಆರ್ ಆದ

ಮರುದಿನವೇ ಬ್ಯಾಂಕಿಗೆ ಹೋಗಿ ದಾಖಲೆಗಳನ್ನು ಪಡೆಯಲು ತೊಂದರೆ ಇರಲಿಲ್ಲ ಅಂದರೆ ಸರಿ. ಎಫ್.ಐ.ಆರ್ ಆದ 5 ತಿಂಗಳ ನಂತರ ಜಪ್ತು ಪಂಚನಾಮೆ ಆಗಿರುತ್ತದೆ ಅಂದರೆ ಸರಿ.

ನಿಪಿಃ 2 ರ ಚೆಕ್ ಮೇಲ್ನೋಟಕ್ಕೆ ತಿದ್ದುಪಡಿಯಾದಂತೆ ಕಂಡು ಬರಲಿಲ್ಲ ಅಂದರೆ ಸರಿ. ನಿಪಿಃ 2 ರ ಚೆಕ್ ನಕಲಿ ಎಂದು ಹೇಳಲು ಆಗುವುದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿಪಿಃ 2 ಮತ್ತು 17 ರ ಚೆಕ್ ಗಳು ಬಣ್ಣ ಬೇರೆ ಬೇರೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಯಾವ ಸಾಕ್ಷಿದಾರರು ಸಹ ಚೆಕ್ ನ ಬಣ್ಣ ಬೇರೆ ಬೇರೆ ಇರುತ್ತವೆ ಎಂದು ನನ್ನ ಮುಂದೆ ಹೇಳಿರುವುದಿಲ್ಲ ಅಂದರೆ ಸರಿ. ಚೆಕ್ ನಕಲಿ ಇರುತ್ತದೆ ಎಂದು ನಾನು ನಿರ್ಧರಿಸಿರುವುದಿಲ್ಲ, ಬ್ಯಾಂಕಿನವರು ಹೇಳಿರುತ್ತಾರೆ. ನಿಪಿಃ 2 ರ ಚೆಕ್ ಮತ್ತು ಮೂಲ ಚೆಕ್ ಅನ್ನು ಎಫ್.ಎಸ್.ಎಲ್ ಗೆ ಪರೀಕ್ಷೆಗಾಗಿ ಕಳುಹಿಸಿರುವುದಿಲ್ಲ. ಯಾವುದೇ ನಕಲಿ ದಾಖಲೆ ಇಲ್ಲದಿರುವ ಕಾರಣವೇ ಆ ರೀತಿ ವೈಜ್ಞಾನಿಕ ಪರೀಕ್ಷೆಗೆ ದಾಖಲೆಗಳನ್ನು ಕಳುಹಿಸಿಲ್ಲ ಅಂದರೆ ಸರಿಯಲ್ಲ.

ಸಾಕ್ಷಿದಾರರು ದಿಃ 30-08-2013 ರಂದು ಹೇಳಿಕೆ ನೀಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪಂಚನಾಮೆಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲದಿದ್ದರೂ ಚಾಸಾ -1 ರವರ ಮಾತು ಕೇಳಿ ಸುಳ್ಳು ಪರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ.

ಇನ್ ಫ್ರಾ ಟವರ್ ಕಂಪನಿಗೂ ಆರೋಪಿಗೂ ಯಾವ ರೀತಿ ಸಂಬಂಧ ಇದೆ ಎಂಬುದನ್ನು ನಾನು ತನಿಖೆ ಮಾಡಿರುವುದಿಲ್ಲ. ಮೂಲ ಚೆಕ್ ನಲ್ಲಿರುವ ಸಂಖ್ಯೆ ಆರೋಪಿಗೆ ಯಾವ ರೀತಿ ಗೊತ್ತಾಗಿತ್ತದೆ ಎಂದು ನಾನು ತನಿಖೆ ಮಾಡಿರುವುದಿಲ್ಲ. ನಿಪಿಃ 2 ರ ಚೆಕ್ ಅನ್ನು ಯಾವ ವಿಧಾನವನ್ನು ಉಪಯೋಗಿಸಿ

ತಯಾರಿಸಲಾಗಿದೆ ಎಂದು ನಾನು ತನಿಖೆ ಮಾಡಿರುವುದಿಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.